# ಕಿಟ್ಟನ ಸೈಕಲ್

■ ನಾಗೇಶ ಜಿ. ವೈದ್ಯ



ವಿಜಯಕುಮಾರಿ

ಗೆಳೆಯರು ಸೈಕಲ್ ಹೊಡೆವುದ ಕಂಡು
ಸ್ಫೂರ್ತಿಗೊಂಡನು ಕಿಟ್ಟ
ತನಗೂ ಸೈಕಲ್ ಕೊಡಿಸಿರಿ ಎಂದು
ಅಪ್ಪಗೆ ಬೇಡಿಕೆಯಿಟ್ಟ
ಸೈಕಲ್ ಅಂಗಡಿ ಮಾಲಿಕ ತೋರಿದ
ಚೆಂದದ ಮಾಡೆಲ್ಲು
ಬೇಡವೆ ಬೇಡ ಎನ್ನುತ ಆಯ್ದನು
ಎತ್ತರ ಸೀಟಿನ ಸೈಕಲ್ಲು
ಗೆಳೆಯರ ಕರೆದು ಖಾಲಿ ಬಯಲಲಿ
ಸೈಕಲ್ ಓಡಿಸ ಬಂದ
ಚಿಮ್ಮುವ, ನೆಗೆಯುವ ಯತ್ನವ ಮಾಡಿಯೂ
ಸೀಟು ಏರದಾದ
ಅಪ್ಪನೆ ಎತ್ತಿ ಕುಳ್ಳಿರಿಸಿದರು
ಕಿಟ್ಟನ ಎತ್ತರ ಸೀಟಲ್ಲಿ
ಹಿಡಿತವೇ ಇಲ್ಲದೆ ಓಡಿತು ಸೈಕಲ್
ರಭಸದಿ ಇಳಿಜಾರಲ್ಲಿ
ಗಲಿಬಿಲಿಗೊಂಡು ಬ್ರೇಕನು ಒತ್ತಿರೆ
ಬ್ಯಾಲೆನ್ಸ್ ತಪ್ಪಿದ ಕಿಟ್ಟ
ಪ್ಯಾಡಲ್ಲಿಗೂ, ನೆಲಕೂ ಮುಟ್ಟದೆ ಕಾಲು
ಧೊಪ್ಪನೆ ಬಿದ್ದನು ಪಾಪ
ಸೈಕಲ್ ಈ ಕಡೆ, ಕಿಟ್ಟ ಆ ಕಡೆ
ಬಿದ್ದು, ಮುರಿದು ಹಲ್ಲು
ಕಿರಿಚಿದ ಅಪ್ಪಾ ಬೇಡವೆ ಬೇಡ
ಎತ್ತರ ಸೀಟಿನ ಸೈಕಲ್ಲು
■

# ಕಂದ ಪದ್ಯ

■ ಸ್ಕಂದ ಆಗುಂಬೆ

ಎಷ್ಟು ಚಂದ ನಮ್ಮ ಕಂದ
ಬಾಯಿ ತೆರೆದು ನಕ್ಕರೆ
ಪುಟ್ಟ ಹಲ್ಲು, ಹಾಲುಗಲ್ಲ
ನಗುವೆ ಸಿಹಿಯ ಸಕ್ಕರೆ

ನಮ್ಮ ಕಂದ ಇನ್ನೂ ಚಂದ
ಸಿಟ್ಟು ಮಾಡಿಕೊಂಡರೆ
ಕೆಂಪು ಮೂಗು, ಜೋರು ಕೂಗು
ಬಾಯಿ ಜೊಲ್ಲು ಇಳಿದರೆ

ನಮ್ಮ ಕಂದ ಬಹಳ ಅಂದ
ಗುಮ್ಮನಂತೆ ಕೂತರೆ
ಕೆನ್ನೆ ದಪ್ಪ ಮಾಡಿಕೊಂಡು
ತುಟಿಯ ಮುಚ್ಚಿಕೊಂಡರೆ

ಸಾಕು ಕಂದ ಇಷ್ಟು ಚಂದ
ಇನ್ನು ಹೊಗಳಲಾರೆನು
ಸಿಟ್ಟು, ಸಿಡುಕು ಬಿಟ್ಟರೀಗ
ಮುದ್ದು ಮಾಡಿ ಬಿಡುವೆನು..!
■



ಮಂಜುನಾಥ ಹುಲುಕೊಪ್ಪದ